ತಾರೀಖು 11ನೇ ಆಗಸ್ಟ್ 1896.

ನಂ. 1502.—ರೆ. 579, ಮೈಸೂರ್ ಸರ್ವಿಸ್ ರೆಗ್ಯುಲೇಷ್ಯಗಳ 171ನೇ ಆರ್ಟಿಕಲ್ ಅನುಸರಿಸಿ ಕಡೂರು ಡಿಸ್ಟ್ರಿಕ್ಟು ಡೆಪ್ಯೂಟಿ ಕಮ್ಮಿಷನರ್ ಮೆಸ್ಟರ್ ಎಚ್. ಎಚ್. ಸ್ಪಾರ್ಕ್ಸ್‌ಯವರಿಗೆ, 1896ನೇ ಆಗಸ್ಟ್ 12ನೇ ತಾರೀಖಿನಾರಭ್ಯ ಐದು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ಸೀನಿಯರ್ ಅಸಿಸ್ಟೆಂಟ್ ಕಮ್ಮಿಷನರ್ ಯವರು, ಸದರೀ ಮೆಸ್ಟರ್ ಸ್ಪಾರ್ಕ್ಸ್ ಯವರು ರಜಾದ ಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಸದರೀ ಡಿಸ್ಟ್ರಿಕ್ಟಿನ ಚಾಲ್ತಿ ಕೆಲಸಗಳ ಚಾರ್ಜಿನಲ್ಲಿರತಕ್ಕದ್ದು.

ನಂ. 1548.—ಎಕ್ಸೈಸ್. 62, ಸ್ಯ 1893ನೇ ಜನವರಿ 14ನೇ ಮತ್ತು ನಂ 11813—ರೆ. ಫೈ. 233–92ನೇ ನಂಬರ್ ಗವರ್ನ್‌ಮೆಂಟ್ ಇಸ್ತಿಹಾರ್‌ನಾಮೆಯಲ್ಲಿರುವ Vನೇ ರೂಲಿನ 6ನೇ ಪ್ಯಾರಾ (13)ನೇ ಕ್ಲಾಜಿಗೂ ಮತ್ತು ಸದರೀ ಇಸ್ತಿಹಾರ್‌ನಾಮೆಗೆ ಶೇರಿಸಿರುವ "ಎ" ಲೈಸೆನ್ಸಿನ 4 (4)ನೇ ಷರತ್ತಿಗೂ ಈ ಕೆಳಗೆ ಕಂಡದ್ದನ್ನು ಬದಲಾಗಿ ಶೇರಿಸುವ ಬಗ್ಗೆ ಮೈಸೂರ ಗವರ್ನ್‌ಮೆಂಟಿನವರು ಅಪ್ಪಣೆ ಕೊಡುತ್ತಾರೆ.

ರೆವಿನ್ಯೂ ಬೋರ್ಡಿನ ಸ್ಟ್ಯಾಂಡಿಂಗ್ ಆರ್ಡರುಗಳ XIನೇ ಅಧ್ಯಾಯದ 170ನೇ ರೂಲಿನ 4ನೇ ಪ್ಯಾರಾವಿಗೆ ಬಳಪಟ್ಟುವುದಾದ ರಾಸ್ ಪೈಸಿರ್ಫಿಸಿಯಲ್ಲಿರುವ ಬಳ್ಳಾರಿ, ಅನಂತಪುರ, ಕಡಪ ಉತ್ತರ ಆರ್ಕಾಟು, ಶಾಲ್ಯ ಮತ್ತು ಕೊಯಿಮುತ್ತೂರು ಡಿಸ್ಟ್ರಿಕ್ಟುಗಳಿಂದ ಮತ್ತು ಸದರೀ ಡಿಸ್ಟ್ರಿಕ್ಟುಗಳಿಗೆ ಕೇಂದಿಯನ್ನು ಆಮದ್‌ರಫ್ತ್ ಮಾಡುವ ಬಗ್ಗೆ ಬೆಂಗಳೂರು, ಕೋಲಾರ, ತುಮಕೂರು, ಮೈಸೂರು ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟುಗಳ ಡೆಪ್ಯೂಟಿ ಕಮ್ಮಿಷನರುಗಳು ಅವರುಗಳ ಯುಕ್ತಾನುಸಾರ ಅಪ್ಪಣೆ ಕೊಡಬಹುದು. ಸದರೀ ಆರ್ಡರಿನ ಯಕ್ಸ್‌ಟ್ರಾಕ್ಟು ಅಂದರೆ ಭಾಗವು ಇದರ ಬಾಜೂದಲ್ಲಿ ಕಾಣಿಸಿರುತ್ತೆ.

XIನೇ ಅಧ್ಯಾಯ, 170ನೇ ರೂಲ್, 4ನೇ ಪ್ಯಾರಾ "ಬಳ್ಳಾರಿ, ಅನಂತಪುರ, ಕಡಪ, ಉತ್ತರ ಆರ್ಕಾಟು, ಶಾಲ್ಯ ಮತ್ತು ಕೊಯಿಮುತ್ತೂರು ಡಿಸ್ಟ್ರಿಕ್ಟುಗಳ ಕಲೆಕ್ಟರುಗಳು ಮೈಸೂರಿಂದ ಮತ್ತು ಮೈಸೂರಿಗೆ ಕೇಂದಿಯನ್ನು ಆಮದ್‌ರಫ್ತ್ ಮಾಡುವ ಬಗ್ಗೆ ಅಪ್ಪಣೆ ಕೊಡಬಹುದು. ಪರಂತು ಕೇಂದಿಯು ಶೇದಾ ರಫ್ತ್ ಮಾಡಲ್ಪಡುವ ಇಜಾರೆ ಸ್ಥಳಗಳ ಗುತ್ತಿಗೆದಾರ್ರಿಗೆ ಮಾತ್ರವೇ ರಹದಾರಿಗಳು ಕೊಡಲ್ಪಡತಕ್ಕದ್ದು."

ಹುಕುಂ ಬಮೋಜೀಬ್,

ಸಿ. ಶ್ರೀನಿವಾಸಯ್ಯಂಗಾರ್, ಜನರಲ್ ವ ರೆವಿನ್ಯೂ ಇಲಾಖೆಗಳ ಗವರ್ನ್‌ಮೆಂಟ್ ಸೆಕ್ರೆಟರಿ.

ಪಬ್ಲಿಕ್‌ವರ್ಕ್ಸ್.

ಇಸ್ತಿಹಾರ್‌ನಾಮಾ.

ತಾರೀಖು 7ನೇ ಆಗಸ್ಟ್ 1896.

ಇಸ್ತಿಹಾರ್‌ನಾಮ ನಂ. 736.—4122, ಲೋಕಲ್ ಮೈಸೂರ್ ಪಬ್ಲಿಕ್‌ವರ್ಕ್ಸ್ ಇಲಾಖೆಯ ಅಪ್ಪರ್ ಸಬ್‌ಆರ್ಡಿನೇಟ್ ಕಛೇರಿಯಲ್ಲಿ ಈ ಕೆಳಗೆ ಕಂಡ ಬಡ್ತಿಗಳು 1896ನೇ ಏಪ್ರಿಲ್ 6ನೇ ಮತ್ತು ಲಾಗಾಯತು ಮಾಡಲ್ಪಟ್ಟಿರುತ್ತವೆ:—

ಡಿವಿಜ್.	ಹೆಸರುಗಳು.	ಹಾಲಿ ದರ್ಜೆ.	ಬಡ್ತೀ ಮಾಡಲ್ಪಟ್ಟ ದರ್ಜೆ.	ಬಡ್ತಿಯ ಸ್ವಭಾವ.	ಷರಾ.
ಬೆಂಗಳೂರು ..	ಏ. ಮುನಿಸಾಮಿ ಮೊದಲಿಯಾರು ..	2ನೇ ಗ್ರೇಡ್ ಸೂಪರ್‌ವೈಜರ್ ..	1ನೇ ಗ್ರೇಡ್ ಸುಪರ್ ವೈಜರ್ ..	ಖಾಯಂ	ಮೃತಪಟ್ಟ ಮೆ॥ ಡಬ್ಲ್ಯೂ. ಎಂ. ಮೆಲ್ಲರಿಗೆ ಬದಲಾಗಿ.
ಮೈಸೂರು ..	ಮೆಸ್ಟರ್ ಎಚ್. ಎಲ್. ಹ್ವೀಲರ್	3ನೇ ಗ್ರೇಡ್ ಸೂಪರ್‌ವೈಜರ್ ..	2ನೇ ಗ್ರೇಡ್ ಸುಪರ್ ವೈಜರ್ ..	ಡಿಟೋ	
ಚಿತ್ರದುರ್ಗ ..	ಏ. ನಲ್ಲನಾಯಗಂ ಮೊದಲಿಯಾರು ..	1ನೇ ಗ್ರೇಡ್ ಓವರ್‌ಸಿಯರ್ ..	3ನೇ ಗ್ರೇಡ್ ಸುಪರ್ ವೈಜರ್ ..	ಡಿಟೋ	
ಬೆಂಗಳೂರು ..	ಮೆಸ್ಟರ್ ಆರ್. ಈ. ಫೋರಿ ಗಾರ್ಡಿ	ಸೂಪರ್‌ನ್ಯೂಮರೆರಿ 1ನೇ ಗ್ರೇಡ್ ಓವರ್‌ಸಿಯರ್ ..	1ನೇ ಗ್ರೇಡ್ ಓವರ್‌ಸಿಯರ್ ..	ಡಿಟೋ	

ತಾರೀಖು 12ನೇ ಆಗಸ್ಟ್ 1896.

ನಂ. 743.—4203, ಚಾಮರಾಜ ನಾಲೆ ಡಿವಿಜನಿಗೆ ಶೇರಿದ ಸಬ್ ಅಸಿಸ್ಟೆಂಟ್ ಇಂಜಿನಿಯರ್ ಮೆಸ್ಟರ್ ಬಿ. ಸಿ, ಶ್ರೀನಿವಾಸಯ್ಯಂಗಾರ್ರಿಗೆ ಮಾಹೆ ಮಜಕೂರು 15ನೇ ತಾರೀಖು ಲಾಗಾಯತು ಯಾ ಅವರು ಹೊರಟ ತಾರೀಖಿನಾರಭ್ಯ ಇಪ್ಪತ್ತೈದು ದಿನಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಹುಕುಂ ಬಮೋಜೀಬ್,

ಸಿ. ಬರ್ಡ್, ಕರ್ನಲ್,

ಮೈಸೂರ್ ಗವರ್ನ್‌ಮೆಂಟ್ ಪಬ್ಲಿಕ್‌ವರ್ಕ್ಸ್ ಇಲಾಖಾ ಸೆಕ್ರೆಟರಿ.